# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೊಂಭತ್ತನೆಯ ಅಧಿವೇಶನ

## ಕಾರ್ಯಕಲಾಪಗಳ ಪಟ್ಟಿ

**ಮಂಗಳವಾರ, ದಿನಾಂಕ:21ನೇ ಫೆಬ್ರವರಿ, 2023**

**(ಸಮಯ: ಬೆಳಗ್ಗೆ: 10.30 ಗಂಟೆಗೆ)**

* * *

## 01. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಆರನೆಯ ಪಟ್ಟಿ

ಆ) **ತಡೆಹಿಡಿಯಲಾದ ಪ್ರಶ್ನೆ:**

| | |
|---|---|
| 2ನೇ ಪಟ್ಟಿಯಿಂದ ತಡೆಹಿಡಿಯಲಾದ **ಶ್ರೀ ಮಂಜುನಾಥ್ ಭಂಡಾರಿ** ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 17 (154) | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು |
| 2ನೇ ಪಟ್ಟಿಯಿಂದ ತಡೆಹಿಡಿಯಲಾದ **ಶ್ರೀ ಸಲೀಂ ಅಹಮದ್** ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 26 (194) | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು |
| 3ನೇ ಪಟ್ಟಿಯಿಂದ ತಡೆಹಿಡಿಯಲಾದ **ಶ್ರೀ ಅರವಿಂದ ಕುಮಾರ್ ಅರಳಿ** ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 42 (312) | ಮಾನ್ಯ ಸಹಕಾರ ಸಚಿವರು |

ಇ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಆರನೆಯ ಪಟ್ಟಿ

## 02. ವರದಿಯನ್ನೊಪ್ಪಿಸುವುದು

**ಶ್ರೀ ಶರವಣ ಟಿ.ಎ.** (ಸದಸ್ಯರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ) ಅವರು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಆರ್ಥಿಕ ಇಲಾಖೆಗೆ ಸಂಬಂಧಿಸಿದ 2011-2012ರಿಂದ 2019-2020ನೇ ಸಾಲಿನ ಆರ್ಥಿಕ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನೆಯ 10ನೇ ವರದಿ ಹಾಗೂ 2017-2018ನೇ ಸಾಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ (ರಾಜಸ್ವ ವಲಯ) ವರದಿಯಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ (ಗಣಿ ಮತ್ತು ಭೂ ವಿಜ್ಞಾನ) ಇಲಾಖೆಗೆ ಸಂಬಂಧಿಸಿದ **"ಕರ್ನಾಟಕದಲ್ಲಿ ಅಪ್ರಧಾನ ಖನಿಜಗಳ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ವ್ಯವಸ್ಥಿತ ಮತ್ತು ವೈಜ್ಞಾನಿಕ, ಗಣಿಗಾರಿಕೆ ಮತ್ತು ಪರಿಸರ ಸಂರಕ್ಷಣೆ"** ಮೇಲಿನ ಲೆಕ್ಕಪರಿಶೋಧನೆಯ 11ನೇ ವರದಿಯನ್ನೊಪ್ಪಿಸುವುದು.

## 03. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ

"2023ನೇ ಫೆಬ್ರವರಿ, 10ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಶಾಸಕರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಶಾಸಕರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ದಿನಾಂಕ:13.02.2023ರಂದು **ಡಾ॥ ತೇಜಸ್ವಿನಿ ಗೌಡ** ರವರು ಸೂಚಿಸಿದ ಪ್ರಸ್ತಾವದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ.

## 04. ಗಮನ ಸೆಳೆಯುವ ಸೂಚನೆಗಳು

೦1. **ಶ್ರೀ ಅರುಣ್ ಡಿ.ಎಸ್.** ಅವರು ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಸೂಕ್ತ ತನಿಖೆ ನಡೆಸುವ ಕುರಿತು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನ ಸೆಳೆಯುವುದು.

೦2. **ಶ್ರೀ ಪಿ.ಆರ್. ರಮೇಶ್** ಅವರು ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚುವ ಸಲುವಾಗಿ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

೦3. **ಶ್ರೀ ಶಶೀಲ್ ಜಿ. ನಮೋಶಿ** ಅವರು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ 1961 ಕಲಂ 4(ಎ)(1)ರ ಅಧಿಸೂಚನೆ ಅನ್ವಯ ಕಲ್ಬುರ್ಗಿ ನಗರ ಯೋಜನಾ ಪ್ರದೇಶಕ್ಕೆ ಗ್ರಾಮಗಳನ್ನು ಸೇರ್ಪಡೆ ಮಾಡಿದ್ದರೂ ಕಾರ್ಯರೂಪಕ್ಕೆ ಬಾರದಿರುವ ಕುರಿತು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುವುದು.

೦4. **ಶ್ರೀ ಸಿ.ಎನ್. ಮಂಜೇಗೌಡ** ಅವರು ಕಾರ್ಮಿಕ ವಿಮಾ ಆಸ್ಪತ್ರೆಗಳನ್ನು (ಇ.ಎಸ್.ಐ) ಸೊಸೈಟಿಯಾಗಿ ಪರಿವರ್ತಿಸಿ ಖಾಸಗೀಕರಣಗೊಳಿಸುವುದರ ಬದಲಾಗಿ ಆಸ್ಪತ್ರೆಗಳನ್ನು ಅತ್ಯಾಧುನಿಕ ವೈದ್ಯಕೀಯ ಉಪಕರಣದೊಂದಿಗೆ ಮೇಲ್ದರ್ಜೆಗೇರಿಸುವ ಕುರಿತು ಮಾನ್ಯ ಕಾರ್ಮಿಕ ಸಚಿವರ ಗಮನ ಸೆಳಯುವುದು.

೦5. **ಶ್ರೀ ಕೆ. ಹರೀಶ್ ಕುಮಾರ್** ಅವರು ಕರಾವಳಿ ಜಿಲ್ಲೆಯ ಸುತ್ತಮುತ್ತಲಿನ ಪಂಚ ಜಿಲ್ಲೆಗಳಿಗೆ ಅನುಕೂಲವಾಗುವಂತೆ ಹೈಕೋರ್ಟ್ ವಿಭಾಗೀಯ ಪೀಠವನ್ನು ಸ್ಥಾಪಿಸಬೇಕೆನ್ನುವ ಕುರಿತು ಮಾನ್ಯ ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರ ಗಮನ ಸೆಳೆಯುವುದು.

೦6. **ಶ್ರೀ ಪುಟ್ಟಣ್ಣ** ಅವರು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿನ 15 ಜಿಲ್ಲಾ ಅಧಿಕಾರಿಗಳ(ಗ್ರೇಡ್-1) ಹುದ್ದೆಗಳಿಗೆ ಮುಂಬಡ್ತಿ ನೀಡುವ ಕುರಿತು ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರ ಗಮನ ಸೆಳೆಯುವುದು.

೦7. **ಶ್ರೀ ಪಿ.ಆರ್. ರಮೇಶ್ ಹಾಗೂ ಶ್ರೀ ಯು.ಬಿ. ವೆಂಕಟೇಶ್** ಅವರುಗಳು ಬೆಂಗಳೂರು ನಗರದ ಗಾಂಧಿಬಜಾರ್ ರಸ್ತೆಯಲ್ಲಿ ಅವೈಜ್ಞಾನಿಕವಾಗಿ ರಸ್ತೆ ಕಾಮಗಾರಿಯನ್ನು ಕೈಗೊಂಡಿರುವ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

೦8. **ಶ್ರೀ ಯು.ಬಿ. ವೆಂಕಟೇಶ್** ಅವರು ಬೆಂಗಳೂರು ನಗರದ ಕತ್ರಗುಪ್ಪೆ ಗ್ರಾಮದ ಸರ್ವೆ ನಂ.15/1ರಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದ ನಿವೇಶನವನ್ನು ನಕಲಿ ದಾಖಲೆಗಳನ್ನು ಸೃಷ್ಠಿಸಿ ಅತಿಕ್ರಮಿಸಿಕೊಂಡಿರುವ ಕುರಿತು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುವುದು.

೦೯. **ಶ್ರೀ ಎಸ್.ವ್ವಿ. ಸಂಕನೂರ** ಅವರು ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ 2011ರಿಂದ 2022ರವರೆಗೆ ಕಾರ್ಯನಿರ್ವಹಿಸಿ ನಿವೃತ್ತಿಯಾದ ಪ್ರಾಧ್ಯಾಪಕರು ಹಾಗೂ ಶಿಕ್ಷಕೇತರ ವರ್ಗಕ್ಕೆ ನಿವೃತ್ತಿ ಬಾಕಿ ಹಣ ಬಿಡುಗಡೆ ಮಾಡದಿರುವ ಕುರಿತು ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಗಮನ ಸೆಳೆಯುವುದು.

## 05. ನಿಯಮ 330ರ ಮೇರೆಗೆ

೦1. **ಶ್ರೀ ಕೆ.ಎ. ತಿಪ್ಪೇಸ್ವಾಮಿ** ಅವರು ರಾಜ್ಯ ಸರ್ಕಾರದಿಂದ ಹಾಲು ಒಕ್ಕೂಟಗಳಿಗೆ ನೀಡಬೇಕಾಗಿರುವ ನೂರಾರು ಕೋಟಿ ಸಹಾಯಧನ ಬಿಡುಗಡೆ ಮಾಡದಿರುವುದರಿಂದ ರಾಜ್ಯದಲ್ಲಿ ಹಾಲು ಉತ್ಪಾದಕರು ಎದುರಿಸುತ್ತಿರುವ ಸಂಕಷ್ಟದ ಕುರಿತು ಪ್ರಸ್ತಾಪಿಸುವುದು.

೦೨. **ಶ್ರೀ ಮಂಜುನಾಥ್ ಭಂಡಾರಿ** ಅವರು ಕರಾವಳಿ ಜಿಲ್ಲೆಯ ಪ್ರಸಿದ್ಧ ಗ್ರಾಮೀಣ ಕ್ರೀಡೆಯಾದ ಕಂಬಳವನ್ನು ರಾಜ್ಯ ಮಟ್ಟದ ಹಾಗೂ ಕರಾವಳಿಯ ನಾಡ ಕ್ರೀಡೆಯಾಗಿ ಘೋಷಿಸುವ ಕುರಿತು ಪ್ರಸ್ತಾಪಿಸುವುದು.

೦೩. **ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಶರವಣ ಟಿ.ಎ, ಶ್ರೀ ಸಿ.ಎನ್. ಮಂಜೇಗೌಡ ಹಾಗೂ ಶ್ರೀ ಕೆ.ಎ. ತಿಪ್ಪೇಸ್ವಾಮಿ** ಅವರುಗಳು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ಗ್ರಾಮ ಪಂಚಾಯತಿಗಳಿಂದಲೇ ಹಣ ಸಂಗ್ರಹಿಸಲು ಸರ್ಕಾರ ಮುಂದಾಗಿರುವ ಕುರಿತು ಪ್ರಸ್ತಾಪಿಸುವುದು.

೦೪. **ಶ್ರೀ ಪ್ರಕಾಶ್ ಕೆ. ರಾಥೋಡ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು** ಅವರು ರಾಜ್ಯದಲ್ಲಿರುವ ಖಾಸಗಿ ಶಾಲೆಗಳಲ್ಲಿ ಕೇಂದ್ರ ಪಠ್ಯ ಕ್ರಮವನ್ನು ಭೋದಿಸಲು ಶಿಕ್ಷಣ ಇಲಾಖೆಯಿಂದ ಎನ್.ಓ.ಸಿ. ಪಡೆಯಲು ಸಾಧ್ಯವಾಗದೆ ಇರುವ ಶಾಲೆಗಳ ಆಡಳಿತ ಮಂಡಳಿಯವರು ಅಕ್ರಮವಾಗಿ ನಕಲಿ ಎನ್.ಓ.ಸಿ. ಪತ್ರಗಳನ್ನು ನೀಡುತ್ತಿರುವ ಕುರಿತು ಪ್ರಸ್ತಾಪಿಸುವುದು.

## 06. ಅರ್ಧ ಗಂಟೆ ಕಾಲಾವಧಿ ಚರ್ಚೆ

ಬ್ರಿಗೇಡ್ ಸಂಸ್ಥೆ ನಿಗದಿತ ಅವಧಿಯಲ್ಲಿ ಯೋಜನೆ ಕಾರ್ಯಗತಗೊಳಿಸದ ಬಗ್ಗೆ ದಿನಾಂಕ:14.02.2023ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:27(199)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಮರಿತಿಬ್ಬೇಗೌಡ** ಅವರು ಅರ್ಧ ಗಂಟೆ ಕಾಲಾವಧಿ ಚರ್ಚೆ.

## 07. ವಿತ್ತೀಯ ಕಾರ್ಯಕಲಾಪ

2023-24ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

---

**ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.**

**www.kla.kar.nic.in/council/council.htm**